ಅವಕಾಶ ಸಿಕ್ಕಿತು. ಅದಾದ ಮರುವರ್ಷ ಕೊರೊನಾ ಕಾರಣಕ್ಕೆ ಮನೆಯಲ್ಲಿಯೇ ಇರಬೇಕಾಯ್ತು.

ಈಗ ಸತ್ಯಪ್ರಕಾಶ್ ನಿರ್ದೇಶನದ 'ಮ್ಯಾನ್ ಆಫ್ ದಿ ಮ್ಯಾಚ್' ಸಿನಿಮಾದಲ್ಲಿ ಮಯೂರಿ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದಾರೆ. 'ಇದು ಕಾದು ಕಾದು ಕೊನೆಯಲ್ಲಿ ಸಿಕ್ಕ ಅವಕಾಶ' ಎನ್ನುತ್ತಾರೆ ಅವರು.

'ಸಾಮಾನ್ಯವಾಗಿ ಎಲ್ಲ ಕಥೆಗಳು ಒಂದು ಪ್ಯಾಟರ್ನ್ ಅನ್ನು ನೆನಪಿಸುತ್ತವೆ. ಈ ಸಿನಿಮಾದ ಆಡಿಷನ್‌ಗೆ ಹೋದಾಗ, ಅಲ್ಲಿ ನನಗೆ ಕೊಟ್ಟ ಸಂಭಾಷಣೆಯೂ ಹಾಗೆಯೇ ಇತ್ತು. ಆದರೆ ಯಾವಾಗ ಈ ಸಿನಿಮಾದಲ್ಲಿ ನಟಿಸುವುದು ಖಚಿತವಾಗಿ, ನಿರ್ದೇಶಕರು ಕಥೆ ಹೇಳಿದರೋ ಆಗ ನನಗೆ ಇದು ಯಾವ ಪ್ಯಾಟರ್ನ್ ಅನ್ನೂ ನೆನಪಿಸದ ಸಂಪೂರ್ಣ ವಿಭಿನ್ನ ಕಥೆ ಎಂದು ಗೊತ್ತಾಯ್ತು' ಎಂದು ಸಿನಿಮಾದ ಬಗ್ಗೆ ಹೇಳುತ್ತಾರೆ ಮಯೂರಿ.

'ಈ ಕಥೆ ನನ್ನ ತಲೆ ಕೆಡಿಸ್ತು. ಇದರ ಸೆಟಪ್ ಪೂರ್ತಿ ಬೇರೆಯೇ ಇದೆ. ಪಾತ್ರವೇನೋ ನಾರ್ಮಲ್ ಆಗಿದೆ. ಆದ್ರೆ ಸನ್ನಿವೇಶವೇ ನಾರ್ಮಲ್ ಆಗಿಲ್ವಲ್ಲಾ ಅನಿಸಿತು. ಯಾವುದೋ ಒಂದು ಅಥವಾ ಎರಡು ಪಾತ್ರಗಳ ಮೇಲೆ ನಿಂತಿರುವ ಸಿನಿಮಾ ಅಲ್ಲ ಇದು. ಎಲ್ಲ ಪಾತ್ರಗಳೂ ಸಿನಿಮಾಕ್ಕೆ ತಮ್ಮದೇ ಆದ ಕೊಡುಗೆಯನ್ನು ಕೊಡುತ್ತವೆ' ಎಂಬುದು ಅವರ ವಿವರಣೆ.

'ಈ ಪಾತ್ರಕ್ಕೆ ನೀವು ಯಾವ ಸಿದ್ಧತೆಯನ್ನೂ ಮಾಡಿಕೊಳ್ಳಬೇಡಿ. ಆಡಿಷನ್‌ಗೆ ಬರ್ತಿದೀನಿ ಅಂದುಕೊಂಡೇ ಬನ್ನಿ' ಎಂದು ನಿರ್ದೇಶಕರು ತುಂಬ ಸ್ಪಷ್ಟವಾಗಿ ಹೇಳಿಬಿಟ್ಟಿದ್ದಾರಂತೆ. 'ಸಾಮಾನ್ಯವಾಗಿ ಯಾವುದಾದರೂ ಪಾತ್ರ ಮಾಡುವಾಗ ನಾವು ಒಂದಿಷ್ಟು ಸಂಗತಿಗಳನ್ನು ಕಲಿತುಕೊಳ್ಳಬೇಕಾಗುತ್ತದೆ. ಆದರೆ ಈ ಪಾತ್ರಕ್ಕೆ ಕಲಿಯುವುದಕ್ಕಿಂತ ಮರೆಯುವುದೇ ಹೆಚ್ಚು ಮುಖ್ಯವಾಗಿತ್ತು. ನಟನೆಯ ಕೌಶಲಗಳನ್ನು ಮರೆತು ಆದಷ್ಟೂ ಸಹಜವಾಗಿರುವುದನ್ನೇ ಈ ಪಾತ್ರ ಬೇಡುತ್ತದೆ' ಎಂದು ತಮ್ಮ ಪಾತ್ರದ ಬಗ್ಗೆ ಅವರು ಹೇಳುತ್ತಾರೆ.

'ಜನರು ನನ್ನನ್ನು ಸ್ಟಾರ್ ಹೀರೊಯಿನ್ ಆಗಿ ನೋಡುವುದು ಬೇಕಾಗಿಲ್ಲ. ಬದಲಿಗೆ ನಾನೂ ಅವರಂತೆ ಸಾಕಷ್ಟು ಕೊರತೆಗಳಿರುವ ಸಾಮಾನ್ಯ ಮನುಷ್ಯಳು ಎಂದು ನೆನಪಿಟ್ಟುಕೊಂಡರೆ ಸಾಕು' ಎನ್ನುವ ಮಯೂರಿ, ತಮ್ಮ ಓದನ್ನು ಮುಂದುವರಿಸುವುದರ ಜೊತೆಗೆ ನಟನೆಯ ದಾರಿಯಲ್ಲಿಯೂ ಹೆಜ್ಜೆಗುರುತು ಮೂಡಿಸುವ ಹಂಬಲದಲ್ಲಿದ್ದಾರೆ. ■

# ಬೆಟ್ಟಿಂಗ್ ಕೆಡುಕಿನ ಬಗ್ಗೆ ಕೀರ್ತನೆ!

'ಕೆಮೆಸ್ಟ್ರಿ ಆಫ್ ಕರಿಯಪ್ಪ' ಸಿನಿಮಾ ಮಾಡಿ ಗೆದ್ದಿದ್ದ ತಂಡ ಈಗ ಕೀರ್ತನೆ ಹಾಡುವ ಉತ್ಸಾಹದಲ್ಲಿದೆ. 'ಕ್ರಿಟಿಕಲ್ ಕೀರ್ತನೆಗಳು' ಈ ತಂಡವೇ ಸೇರಿಕೊಂಡು ರೂಪಿಸಿರುವ ಮತ್ತೊಂದು ಸಿನಿಮಾ. ಈ ಸಿನಿಮಾದಲ್ಲಿ ಸಮಾಜಕ್ಕೆ ಉಪಯುಕ್ತ ಅನ್ನಿಸುವ ಸಂದೇಶವೊಂದನ್ನು ಮನರಂಜನೆಯ ಹೋಳಿಗೆಯೊಳಗೆ ಇಟ್ಟು ಬಡಿಸಲು ತಂಡ ಮುಂದಾಗಿದೆ.

ಕುಮಾರ್ ಈ ಚಿತ್ರದ ನಿರ್ದೇಶಕ. 'ಪ್ರತಿವರ್ಷ ಬೆಟ್ಟಿಂಗ್‌ನಲ್ಲಿ ಸೋತು ಏನಿಲ್ಲವೆಂದರೂ ಇನ್ನೂರು ಜನರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಅದರಲ್ಲಿ ತೊಡಗಿರುವ ಶೇ 70ರಷ್ಟು ಜನರ ಬದುಕು ಸಾಲದ ಸುಳಿಯಲ್ಲಿ ಹೊರಳಾಡುತ್ತಿದೆ. ಈ ಗಂಭೀರ ವಿಷಯದ ಕುರಿತೇ ನಾವು ಸಿನಿಮಾ ಮಾಡುತ್ತಿದ್ದೇವೆ' ಎನ್ನುತ್ತಾರೆ ಅವರು. ವಿಷಯ ಗಂಭೀರವಾಗಿದೆ ಎಂದಾಕ್ಷಣ ಸಿನಿಮಾ ಕೂಡ ಗಂಭೀರವಾಗಿರುತ್ತದೆ ಎಂದುಕೊಳ್ಳಬೇಕಾಗಿಲ್ಲ. ಸಾಕಷ್ಟು ಮನರಂಜನೆಯ ಅಂಶಗಳನ್ನು ಇಟ್ಟುಕೊಂಡೇ ಅವರು ಸಿನಿಮಾ ಮಾಡಿದ್ದಾರೆ. ಕ್ಲೈಮ್ಯಾಕ್ಸ್ ಅಂತೂ ಬಹುಕಾಲ ಕಾಡುವ ಹಾಗೆ ಇದೆ ಎನ್ನುತ್ತದೆ ಚಿತ್ರತಂಡ.

ಈ ಚಿತ್ರದಲ್ಲಿ ತಬಲಾನಾಣಿ ವಕೀಲನ ಪಾತ್ರದಲ್ಲಿ ನಟಿಸಿದ್ದಾರೆ. ಕೆಮೆಸ್ಟ್ರಿ ಆಫ್ ಕರಿಯಪ್ಪ ಚಿತ್ರದ ಗೆಲುವು ತಮಗೆ ಸಾಕಷ್ಟು ಅವಕಾಶಗಳನ್ನು ತಂದುಕೊಟ್ಟ ಹಾಗೆ ಈ ಚಿತ್ರವೂ ತನ್ನನ್ನು ಇನ್ನಷ್ಟು ಜನ ಗುರ್ತಿಸುವ ಹಾಗೆ ಮಾಡಲಿದೆ ಎಂಬ ನಂಬಿಕೆಯನ್ನು ಅವರು ವ್ಯಕ್ತಿಪಡಿಸುತ್ತಾರೆ. ಅರುಣಾ ಬಾಲರಾಜ್, ಗುರುರಾಜ ಹೊಸಕೋಟೆ, ತರಂಗ ವಿಶ್ವ, ಸುಚೇಂದ್ರ ಪ್ರಸಾದ್, ರಾಜೇಶ್ ನಟರಂಗ, ಅಪೂರ್ವ ಭಾರದ್ವಾಜ್, ದೀಪಾ ಜಗದೀಶ್ ಸೇರಿದಂತೆ ಹಲವು ಈ ಚಿತ್ರದಲ್ಲಿ ನಟಿಸಿದ್ದಾರೆ. ವೀರಸಮರ್ಥ ಸಂಗೀತ, ಶಿವಸೇನ ಛಾಯಾಗ್ರಹಣ ಚಿತ್ರಕ್ಕಿದೆ. ■



ದೀಪಾ ಜಗದೀಶ್

# ದಸರೆ ಗುಂಗಲ್ಲಿ ಸತೀಶ್, ಶರ್ಮಿಳಾ



'ಕಹಿ', ಮತ್ತು 'ಅಳಿದುಳಿದವರು' ಸಿನಿಮಾ ನಿರ್ದೇಶಕರ ಮುಂದಿನ ಸಿನಿಮಾ 'ದಸರಾ'. ಈ ಚಿತ್ರದಲ್ಲಿ ನೀನಾಸಂ ಸತೀಶ್ ಮತ್ತು ಶರ್ಮಿಳಾ ಮಾಂಡ್ರೆ ಮುಖ್ಯಭೂಮಿಕೆಯಲ್ಲಿ ಅಭಿನಯಿಸುತ್ತಿದ್ದಾರೆ. ಅಷ್ಟೇ ಅಲ್ಲ, ಶರ್ಮಿಳಾ ಈ ಚಿತ್ರದ ನಿರ್ಮಾಣದ ಹೊಣೆಯನ್ನೂ ಹೊತ್ತಿದ್ದಾರೆ.

ಹೊಸ ರೀತಿಯ ಥ್ರಿಲ್ಲರ್ ಕಥೆಯನ್ನು ಕೇಳಿ ಇಷ್ಟವಾಗಿ ಅವರು ಹಣ ಹೂಡಿದ್ದಾರಂತೆ. ಈ ಸಿನಿಮಾ ಪ್ರೇಕ್ಷಕರಿಗೂ ಇಷ್ಟವಾಗಿಯೇ ಆಗುತ್ತದೆ ಎಂಬ ನಂಬಿಕೆ ಅವರದ್ದು. ಈ ಚಿತ್ರದಲ್ಲಿ ಶರ್ಮಿಳಾ ತನಿಖಾ ಪತ್ರಕರ್ತೆಯಾಗಿ ಕಾಣಿಸಿಕೊಂಡಿದ್ದಾರಂತೆ. ಈಗಾಗಲೇ ಚಿತ್ರದ ಬಹುತೇಕ ಭಾಗ ಚಿತ್ರೀಕರಣವಾಗಿದ್ದು, ಕೊನೆಯ ಹಂತದ ಚಿತ್ರೀಕರಣ ನಡೆಯುತ್ತಿದೆ. ಸಿನಿಮಾದ ಬಹುತೇಕ ಕಥೆ ನಡೆಯುವುದು ರಾತ್ರಿ ಹೊತ್ತಿನಲ್ಲಿ. ಹಾಗಾಗಿ ಬೆಳಗಿನಜಾವದವರೆಗೆ ಚಿತ್ರೀಕರಣ ನಡೆಸಲಾಗುತ್ತಿದೆ. 'ತಂಡ ತುಂಬ ಚೆನ್ನಾಗಿದೆ. ಹಾಗಾಗಿ ನಾವೆಲ್ಲ ಚಿತ್ರೀಕರಣವನ್ನು ಎಂಜಾಯ್ ಮಾಡುತ್ತಿದ್ದೇವೆ' ಎಂದು ಖುಷಿ ಹಂಚಿಕೊಂಡಿದ್ದಾರೆ ಶರ್ಮಿಳಾ. ■